**ದಿನಾಂಕಃ 07.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ವಕೀಲರಿಂದಃ**

ಅಪಘಾತವಾಗಿರುವ ಕಾರಣ ಪರಿಹಾರ ಪಡೆಯಲು ಪ್ರಕರಣ ದಾಖಲಿಸಿರುತ್ತೇನೆ. ನಾನು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆನು, ಕೆಎ-53-ಡಿ-3234 ಸಂಖ್ಯೆಯ ಟಾಟಾ ವಾಟರ್ ಟ್ಯಾಂಕ್ ವಾಹನವು ಹಿಂದಿನಿಂದ ಬಂದು ಡಿಕ್ಕಿಪಡಿಸಿರುತ್ತದೆ. ಅಪಘಾತ ಸ್ಥಳವು ಸರ್ಕಲ್ ಆಗಿದ್ದು ನನ್ನ ಮುಂದೆ ಒಂದು ವಾಹನ ಪಾಸ್ ಆದ ನಾನು ನನ್ನ ವಾಹನವನ್ನು ನಿಧಾನಗೊಳಿಸಿದೆ, ಆಗ ಹಿಂದಿನಿಂದ ಬಂದ ಟ್ಯಾಂಕರ್ ನನ್ನ ದ್ವಿಚಕ್ರ ವಾಹನದ ಎಡಭಾಗಕ್ಕೆ ಉಜ್ಜಿಕೊಂಡು ಹೋಗಿ ಅಪಘಾತವಾಗಿರುತ್ತದೆ.

**2.** ಅಪಘಾತದಿಂದಾಗಿ ನನ್ನ ಎಡಗೈಗೆ ನೋವು ಉಂಟಾಗಿ ಕೆ-ವೈರ್ ಅಳವಡಿಸಿರುತ್ತಾರೆ ಮತ್ತು ಎಡಗಾಲಿಗೆ ಎರಡು ಸ್ಕ್ರೂ ಹಾಕಿರುತ್ತಾರೆ. ಅಪಘಾತವಾದ ನಂತರ ನನ್ನನ್ನು ಸ್ವಸ್ತ ಆಸ್ಪತ್ರೆಗೆ ದಾಖಲಿಸಿದರು. ಅಪಘಾತದ ದಿನವೇ ಆಸ್ಪತ್ರೆಗೆ ದಾಖಲಾಗಿದ್ದು ನನ್ನನ್ನು ದಿ.24.09.2024 ರಂದು ಬಿಡುಗಡೆಗೊಳಿಸಲಾಯಿತು. ನೀವು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಳ್ಳದ ಕಾರಣ ನೀವು ಡಿಸ್ಚಾರ್ಜ್ ಸಮ್ಮರಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

3. ನಾನು ಸರ್ಜಾಪುರದ ಕಾರ್ಮೆಲ್ ಕಾನ್ವೆಂಟಿನಲ್ಲಿ ಸಹ ಶಿಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೆನು. ನನಗೆ ತಿಂಗಳಿಗೆ 35 ಸಾವಿರ ವೇತನವಿತ್ತು. ನೀವು ಸದರಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ, ಆ ಕಾರಣ ದಾಖಲೆಯನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಮಗೆ ತಿಂಗಳಿಗೆ 35 ಸಾವಿರ ವೇತನವಿರಲಿಲ್ಲ ಎಂದರೆ ಸರಿಯಲ್ಲ. ನನಗೆ ತಿಂಗಳಿಗೆ 50 ಸಾವಿರ

ಆದಾಯವಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಈಗ ನಾನು ಮನೆಯಲ್ಲಿಯೇ ಟ್ಯೂಶನ್ ನಡೆಸುತ್ತಿದ್ದೇನೆ. ಟ್ಯೂಶನ್ ನಿಂದ ನನಗೆ 12 ರಿಂದ 15 ಸಾವಿರ ಆದಾಯವಿದೆ. ಅಪಘಾತವಾದ ನಂತರವೂ ಸಹ ನಿಮಗೆ ಈ ಮೊದಲಿನಂತೆ ಸಾಮಾನ್ಯ ಜೀವನ ನಡೆಸಲು ತೊಂದರೆ ಇಲ್ಲ ಎಂದರೆ ಸರಿಯಲ್ಲ. ಕುಳಿತುಕೊಂಡು ಕೆಲಸ ಮಾಡುವುದಕ್ಕೆ ಯಾವುದೇ ತೊಂದರೆ ಇಲ್ಲ ಎಂದರೆ ಸರಿಯಲ್ಲ.

**4.** ನೀವು ತಕ್ಷಣದಲ್ಲೇ ಬ್ರೇಕ್ ಹಾಕಿದ ಕಾರಣ ಅಪಘಾತವಾಗಿರುತ್ತದೆ, ನೀವು ಸಹ ಅಪಘಾತಕ್ಕೆ ಕಾರಣವಾಗಿರುತ್ತೀರಿ ಎಂದರೆ ಸರಿಯಲ್ಲ. ನೀವು ಯಾವುದೇ ರೀತಿಯ ಸಂಚಾರ ನಿಯಮಗಳನ್ನು ಪಾಲಿಸದೇ ಇರುವ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ನೀವು ಪರಿಹಾರ ಪಡೆದುಕೊಳ್ಳುವುದಕ್ಕಾಗಿ ಮೆಡಿಕಲ್ ಬಿಲ್ಲುಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಾನು ಮೆಡಿಕಲ್ ಇನ್ಸುರೆನ್ಸ್ ಪಡೆದುಕೊಂಡಿರುವುದಿಲ್ಲ, ಹಾಗೆಯೇ ನಮ್ಮ ಶಾಲೆ ವತಿಯಿಂದ ಮೆಡಿಕಲ್ ಕ್ಲೇಮ್ ಇರುವುದಿಲ್ಲ. ನಿಮ್ಮ ಅಜಾಗರೂಕತೆಯಿಂದ ಅಪಘಾತವಾಗಿರುವ ಕಾರಣ ವಿಮಾ ಕಂಪನಿಯು ಪರಿಹಾರ ನೀಡಲು ಬಾದ್ಯಸ್ತರಲ್ಲ ಎಂದರೆ ಸರಿಯಲ್ಲ. ನೀವು 25 ಲಕ್ಷ ರೂ.ಗಳ ಅತಿ ಹೆಚ್ಚು ರೂ.ಗಳ ಪರಿಹಾರ ಕೋರಿದ್ದೀರಿ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಎಲ್ಲಾ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಪಿ ಡಬ್ಲ್ಯೂ.1: ದೀರಜ್.ಕೆ .,

**1 ನೇ ಎದುರುದಾರರು ಗೈರು ಹಾಜರಾದ ಕಾರಣ ಅವರ ಪರವಾಗಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.